ದಿನಾಂಕಃ 13.11.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ನಾನು ಮದುವೆಯಾಗಿ 14 ವರ್ಷವಾಗಿದೆ. ನನ್ನ ಪತ್ನಿಯ ತವರು ಮನೆ ಕೆಳಗೂರು ಗ್ರಾಮದಲ್ಲಿದೆ. ನನ್ನ ಪತ್ನಿಯ ಜನನ ದಿನಾಂಕ ನನಗೆ ಗೊತ್ತಿಲ್ಲ. 1990 ರ ಹಿಂದಿನಿಂದಲೂ ಸ್ವಾಧೀನದಲ್ಲಿ ಇದ್ದವರಿಗೆ ಮಾತ್ರ ಬಗರ್ ಹುಕುಂ ಸಾಗುವಳಿ ಮಂಜೂರಾತಿ ಮಾಡಲಾಗುತ್ತದೆ ಎಂದರೆ ಸರಿ. ವಾದಿಯು ನನ್ನನ್ನು ಮದುವೆಯಾದ ದಿನಾಂಕದವರೆಗೂ ಕೆಳಗೂರು ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ಸಂಬಂಧದ ಮಂಜೂರಾತಿ ಅಕ್ರಮ ಮಂಜೂರಾತಿ ಎಂದು ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಮಂಜೂರಾತಿ ಕಡತವನ್ನು ತರಿಸಿಬೇಕೆಂದು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ದಾವಾ ಜಮೀನಿನ ಪಹಣಿ ಹಾಲಿ ವಾದಿಯ ಹೆಸರಿನಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ನನ್ನ ತಂದೆಯೇ ಜಮೀನು ಮಂಜೂರು ಕೋರಿ ಅರ್ಜಿ ಸಲ್ಲಿಸಲಾಗಿದೆ ಎನ್ನುವ ಹಾಗೆ ಬರೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ದಾಖಲಿಸುವ ಸಂದರ್ಬದಲ್ಲಿ ವಾದಿಯ ವಯಸ್ಸು 35 ಎಂದು ಬರೆಸಿದ್ದೇನೆ ಎಂದರೆ ಸರಿ. 1990 ರಲ್ಲಿ ವಾದಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಜೋಗಣ್ಣನಕೆರೆ ಗ್ರಾಮದ ಸರ್ವೆ ನಂ.50 ಕ್ಕೆ ಸಂಬಂದಪಟ್ಟಂತೆ ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಪ್ರಸ್ತತ ದಾವೆ ಮತ್ತು ಸದರಿ ದಾವೆಯನ್ನು ಒಂದೇ ದಿನಾಂಕದಂದು ದಾಖಲಿಸಲಾಗಿದೆ ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ದ ಸಲ್ಲಿಸಿದ್ದ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆ ಏನು ಆಗಿದೆ ಎಂದು ನಾನು ನನ್ನ ವಕೀಲರ ಬಳಿ ಕೇಳಿಲ್ಲ. ಆ ದಾವೆಯಲ್ಲಿ ನನ್ನ ಹಾಗೂ 1 ನೇ ಪ್ರತಿವಾದಿಯ ಸಾಕ್ಷ್ಯ ವಿಚಾರಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ ದಾವೆಯ ಸಂಖ್ಯೆ ಓ.ಎಸ್.125/2020 ಎಂದಿತ್ತು ಎಂದರೆ ಸರಿ. ಸದರಿ ದಾವೆ ವಜಾ ಆಗಿರುವ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ವಾದಿಯು ಅಕ್ರಮವಾಗಿ ದಾವಾ ಜಮೀನಿನ ಮಂಜುರಾತಿ ಪಡೆದಿದ್ದಾರೆ ಎಂದು ಅವರ ವಿರುದ್ದ ಹಾಗೂ ತಹಶೀಲ್ದಾರ್ ರವರ ವಿರುದ್ದ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದ ನೋಟಿಸು ವಾದಿಗೆ ಬಂದಿತ್ತು ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳು ದಿ.25.08.2021 ರಂದು ಆದೇಶ ಮಾಡಿ ದಾವಾ ಜಮೀನಿನ ಮಂಜೂರಾತಿ ಹಾಗೂ ವಾದಿಯ ಹೆಸರಿಗೆ ಇದ್ದ ಸಾಗುವಳಿ ಚೀಟಿಯನ್ನು ರದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ-3 ರ ಆದೇಶವನ್ನು ಹೆಚ್.ಎಂ. ರಮೇಶ್ ಹೆಸರಿನ ತಹಶೀಲ್ದಾರ್ ರವರು ಮಾಡಿದ್ದಾರೆ ಎಂದರೆ ಸರಿ. ಅಕ್ರಮ ಭೂ ಮಂಜುರಾತಿ ಮಾಡಿದ್ದಾರೆ ಎಂದು ಹೆಚ್.ಎಂ.ರಮೇಶ್ ರವರ ವಿರುದ್ದ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ತಮ್ಮ ಕರ್ತವ್ಯ ಅವದಿಯಲ್ಲಿ ಮಾಡಿರುವ ಭೂ ಮಂಜೂರಾತಿಗಳನ್ನು ರದ್ದು ಮಾಡುವ ಸಂಬಂದ ವಿಚಾರಣೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಾನು

10 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ಈಗ ನೋಡುತ್ತಿರುವ ದಾಖಲೆ ದಾವಾ ಜಮೀನಿನ ಮಂಜೂರಾತಿಯನ್ನು ರದ್ದು ಮಾಡಿರುವ ಆದೇಶ ಎಂದರೆ ಸಾಕ್ಷಿಯು ಆ ರೀತಿ ಕಾಣುತ್ತಿದೆ ಎಂದು ನುಡಿಯುತ್ತಾರೆ. ಸದರಿ ಆದೇಶದ ದೃಡೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ವಾದಿಯು ಹಾಗೂ ಸಂಬಂದಪಟ್ಟ ಅಧಿಕಾರಿಗಳ ವಿರುದ್ದ ಮಾನ್ಯ ಕರ್ನಾಟಕ ಲೋಕಾಯುಕ್ತ ಮುಂದೆ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆ ಉಪವಿಬಾಗಾಧಿಕಾರಿಗಳು ವಾದಿಗೆ ಕೊಟ್ಟಿದ್ದ ನೋಟಿಸಿನ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.